ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 2, Sep-Oct 2019, 96-100**
**©*IIMRD*, Mysuru**
IIMRD JOURNALS
**www.iimrd.com**

# ಕಾವ್ಯದ ಜೀವಾಳ: ರೀತಿ–ಮಾರ್ಗ

**ಡಾ. ಎಸ್.ಬಿ. ರಾಠೋಡ**[1]

**ಪೀಠಿಕೆ**

ಮೀಮಾಂಸಕರು ಕಾವ್ಯವನ್ನು ಒಬ್ಬ ವ್ಯಕ್ತಿಯೆಂದು ಪರಿಭಾವಿಸಿಕೊಂಡದ್ದರಿಂದ, ವ್ಯಕ್ತಿಗೆ ಅವಶ್ಯಕವಾಗಿ ಬೇಕಾಗಿರುವ ಎಲ್ಲ ಅಂಶಗಳನ್ನು 'ಕಾವ್ಯ'ವನ್ನು ವ್ಯಕ್ತಿಗೆ ಅನ್ವಯಗೊಳಿಸಿ ವಿವೇಚನೆ ಮಾಡಿದ್ದಾರೆ. ರೀತಿ ಅಂದರೆ ಒಬ್ಬ ವ್ಯಕ್ತಿಯ ನಡವಳಿಕೆಗೆ ಹೋಲಿಸಬಹುದು. ಅವನ ನಡೆ, ನುಡಿ ಚೆನ್ನಾಗಿಲ್ಲದಿದ್ದರೆ, ಅವನ ರೀತಿ ಸರಿಯಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ವ್ಯಕ್ತಿಯ ಒಳ–ಹೊರ ನೋಟ ನೋಡುಗರಿಗೆ ಮುದವನ್ನುಂಟು ಮಾಡಬೇಕು. ಇಲ್ಲದಿದ್ದರೆ ಅವನ ವರ್ತನೆಯು ಅಸಹ್ಯವಾಗಿ ತೋರುತ್ತದೆ. ಈ ಮಾತುಗಳನ್ನು ಕಾವ್ಯ ರಚನೆ ಮಾಡುವಾಗ ಖಡಾಖಂಡಿತವಾಗಿ ಬಳಕೆ ಮಾಡಿಕೊಳ್ಳಬೇಕು.

ರೀತಿ–ಮಾರ್ಗ, ಅಥವಾ ಚಿಂತಕರ ಚಿಂತನೆ ಎಂದರೆ ಕಾವ್ಯದ ಬರವಣಿಗೆಯ ಕ್ರಮ. ಈ ಬರವಣಿಗೆ ಕವಿ ಬಳಸುವ ಭಾಷೆಯಿಂದ ರೂಪಗೊಳ್ಳುವ ಪದಸರಣಿಯಾಗಿದೆ. ಈ ಪದಗಳ ಜೋಡಣೆ ಕವಿಯಿಂದ ಕವಿಗೆ ಬೇರೆಯಾಗಿರುತ್ತದೆ. ನಾವು ಕಾವ್ಯಕ್ಕೊಂದು ನಡೆಯಿದೆ ಎಂದು ಅರಿತುಕೊಂಡಾಗ, ಅದು ನಡೆದದ್ದು ಮಾರ್ಗವಾಗತ್ತದೆ. ಆ ಮಾರ್ಗವು ಕವಿಯ ಅಂತಃಸತ್ವ ಅಭಿವ್ಯಕ್ತಿಯ ಸಂಕೇತವಾಗುತ್ತದೆ. ಆದುದರಿಂದಲೇ ರೀತಿಯು "ಮಾರ್ಗ"ವಾಗಿದೆ, ಮಾರ್ಗವು "ಶೈಲಿ"ಯಾಗಿದೆ. ಇವು ಒಂದಕ್ಕೊಂದು ತಳಕು ಹಾಕಿಕೊಂಡ ಅಂಶಗಳಾಗಿ ಭಾರತೀಯ ಕಾವ್ಯಮೀಮಾಂಸೆಯಲ್ಲಿ ನಿರೂಪಿಸಲ್ಪಟ್ಟಿವೆ.

ಕವಿಯಾದವನು ಕಾವ್ಯವನ್ನು ರಚಿಸುವಾಗ ಅತಿ ಸಾಮಾನ್ಯವಾಗಿರುವ ಭಾಷೆಯನ್ನು "ಅತಿಶಯದ ಭಾಷೆ"ಯನ್ನಾಗಿ ಬಳಿಕೆ ಮಾಡಿಕೊಳ್ಳುತ್ತಾನೆ. ಇಂತಹ ನಿರ್ಮಾಣದಲ್ಲಿಯೇ ಅಲಂಕಾರ–ಗುಣ ರೀತಿಗಳೆಲ್ಲ ಕಾಣತ್ತೇವೆ. ಕವಿಯು ಭಾಷೆಯನ್ನು ತನ್ನ ಉದ್ದೇಶಕ್ಕೆ ಅನುಗುಣವಾಗಿ ಪುನರ್ ಸಿದ್ಧವಾಗಿಸಿಕೊಳ್ಳುತ್ತಾನೆ. ಆದುದರಿಂದ ರೀತಿಯೆಂದರೆ ಕವಿಯು ತನ್ನ ಮನೋಧರ್ಮಕ್ಕೆ ಅನುಗುಣವಾಗಿ ಭಾಷೆಯನ್ನು ಬರವಣಿಗೆಗೆ ಒಗ್ಗಿಸಿಕೊಳ್ಳುವ ಕ್ರಮವೆಂದು ತೀರ ಸರಳವಾಗಿ ಹೇಳಬಹುದು.

**ರೀತಿ ಕುರಿತು ವಿದ್ವಾಂಸರ ಅಭಿಮತ**

'ರೀತಿರಾತ್ಮಕಾವ್ಯಸ್ಯ' ಎಂದು ವಾಮನು ರೀತಿಯ ಕುರಿತು ಹೇಳಿದ್ದಾನೆ. ರೀತಿಯೇ ಕಾವ್ಯದ ಆತ್ಮ ಹಾಗಾದರೆ ರೀತಿ ಅಂದರೇನು? ಎಂಬ ಪ್ರಶ್ನೆಗೆ ವಾಮನ ಉತ್ತರ ವಿಶಿಷ್ಠ ಪದರಚನಾ ಕ್ರಮವೇ ರೀತಿ. ಕಾವ್ಯ ವಿಶಿಷ್ಟವಾದ ಪದರಚನೆಯಿಂದ ಮೇಳೈಸುವುದೇ ರೀತಿ. ಕಾವ್ಯದಲ್ಲಿನ ಗುಣಗಳಿಂದಾಗಿ ಪದರಚನೆ

[1] *ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ – 586205.*

ವಿಶಿಷ್ಟವಾಗುವುದು. ರೀತಿಯು ಕಾವ್ಯದ ಗುಣಗಳನ್ನು ಅವಲಂಬಿಸಿರುವುದು. ಪ್ರಾಚೀನರ ಅಭಿಮತದಂತೆ ಗುಣ ಎನ್ನುವುದು ಶಬ್ದ, ಅರ್ಥ ಇವುಗಳ ವಿಶೇಷ ರಚನೆಯನ್ನು ಸೂಚಿಸುತ್ತದೆ ಎಂದು ಹೇಳಬಹುದು.

ವಾಮನ ಅಭಿಮತದಂತೆ ರೀತಿಯು ಮೂರು ಬಗೆಯದು ಮೊದಲನೇಯದು ವೈದರ್ಭಾ, ಎರಡನೇಯದು ಗೌಡಿ ಮತ್ತು ಮೂರನೇಯದು ಪಾಂಚಲೀ. ಇವು ಕಾವ್ಯ ಶರೀರದ ರಕ್ತ, ಮಾಂಸ, ನರಗಳಂತೆ, ಗದ್ಯ ಮತ್ತು ಪದ್ಯದಲ್ಲಿ ರಾರಾಜೀಸುತ್ತವೆ. *ವೈದರ್ಭಾ* 'ಸಮಗ್ರಗುಣಂ ವೈದರ್ಭಿ' ವೈದರ್ಭಿಯಲ್ಲಿ ಸಮಸ್ತ ಗುಣಗಳು ಕೂಡಿರುತ್ತವೆ. ಅದರಲ್ಲಿನ ಸಾಲುಗಳು ಮಾಧುರ್ಯ ಗುಣಗಳಿಂದ, ವ್ಯಂಜಕ ಗುಣಗಳಿಂದ, ಚಿಕ್ಕ, ಚಿಕ್ಕ ಸಮಾಸಗಳಿಂದ ರಚನೆಗೊಂಡಿರುತ್ತವೆ.

ಓಜಸ್ಸು, ಗುಣಪ್ರಧಾನ, ವ್ಯಂಜಕಾ ದೀರ್ಘ ಸಮೂಹಗಳಿಂದ ಕೂಡಿರುವುದೇ *ಗೌಡಿ.* ಇದರಲ್ಲಿ ಅರ್ಥ ಪ್ರೌಢಿಮೆಯೂ, ಭಾವದ ಉಕ್ಕುವಿಕೆಯೂ ವಿಶೇಷವಾಗಿದೆ. ಮತ್ತು *ಪಾಂಚಾಲೀ* 'ಮಾಧುರ್ಯ ಸೌಕುಮಾರ್ಯೋಪನ್ನ ಪಾಂಚಾಲೀ' ಅಂದರೆ ಹೆಚ್ಚು ಸಮಾಸಗಳಿಲ್ಲದೆ ಉಕ್ತಿವೈಚಿತ್ರ್ಯದಿಂದ ಕೂಡಿ ಕೋಮಲವು, ಸೌಮ್ಯವೂ ಆದ ಅರ್ಥವುಳ್ಳದ್ದಾಗಿರುತ್ತದೆ. ಅಂದರೆ ಅದು ವಿಶೇಷವಾಗಿ ಮಾಧುರ್ಯ ಸೌಕುಮಾರ್ಯಗುಣವುಳ್ಳ ಪದ ರಚನೆ. ಹೀಗೆ ವಾಮನು ಮೂರು ಬಗೆಯ ರೀತಿಯನ್ನು ವ್ಯಕ್ತಪಡಿಸಿದ್ದಾನೆ. ವಾಮನ ವಿಚಾರದಲ್ಲಿ ವೈದರ್ಬಿ ರಿತಿಯೇ ಶ್ರೇಷ್ಠವೆಂದು ಹೆಳುತ್ತಾನೆ. ನಾಗವರ್ಮನು ಕಾವ್ಯಕ್ಕೆ ನಿಜವಾದ ಶಕ್ತಿ ಬರುವುದು ಇದರಿಂದಲೇ, ರೀತಿ ಕಾವ್ಯದ ಹೊರಮೈ ಅಷ್ಟೇ ಅಲ್ಲದೆ 'ರೀತಿ ಕೃತಿಗೆ ಒಪ್ಪುವ ಮೈ' ಎಂದು ಅಭಿಪ್ರಾಯ ಪಡುತ್ತಾನೆ.

ಬಾಮಹನು ಎರಡು ಬಗೆಯ *ರೀತಿ*ಗಳನ್ನು ಉಲ್ಲೇಖಿಸುತ್ತಾನೆ. ಒಂದು ವೈದರ್ಬಿ,ಎರಡೂ ಗೌಡಿಯ ಎಂದು ಸೂಚಿಸಿ ಅವುಗಳಿಗೆ ಕಾವ್ಯ ಜಾತಿಗಳೆಂದು ಕರೆಯುತ್ತಾನೆ. ಬಾಮಹನ ಕಾವ್ಯ ಜಾತಿಯಾಗಲಿ, ವಾಮನನ ಕಾವ್ಯ ರೀತಿಯಾಗಲಿ ಒಟ್ಟಿನಲ್ಲಿ ಎರಡು ಒಂದೇ ಎಂದು ಹೇಳಲಾಗುತ್ತದೆ. ದಂಡಿ ವಾಮನಕ್ಕಿಂತಲೂ ಪೂರ್ವ ಅಲಂಕಾರಿಕ *ರೀತಿ* ಬಗ್ಗೆ ಈ ರೀತಿಯ ಅಭಿಪ್ರಾಯ ತಳೆದಿದ್ದಾನೆ. ದಂಡಿಯು ರೀತಿಗೆ ಮಾರ್ಗವೆಂದು ಕರೆದಿರುತ್ತಾರೆ. ಅವರೂ ಕೂಡ ಎರಡು ಬಗೆಯ ರೀತಿಗಳನ್ನು ಗುರುತಿಸಿದ್ದಾರೆ. ಒಂದು ವೈದರ್ಭ ಎರಡು ಗೌಡಿ.

ರುದ್ರಟನು ನಾಲ್ಕು ಬಗೆಯ *ರೀತಿ*ಗಳನ್ನು ತಿಳಿಸುತ್ತಾನೆ. ಮೊದಲನೇಯದು ವೈದರ್ಬಿ, ಎರಡನೇಯದು ಗೌಡಿ, ಮೂರನೇಯದು ಪಾಂಚಾಲೀ ಮತ್ತು ನಾಲ್ಕನೇಯದು ಲಾಟೀಯಾ ಈ ಲಾಟೀಯಾವೆಂಬುವುದು ರುದ್ರಟನು ಸೇರಿಸಿದ ಹೊಸ ರೀತಿಯಾಗಿದೆ. ಲಾಟೀಯಾವೆಂಬ ರೀತಿಯಲ್ಲಿ ಸಮಾಸಗಳಿಂದ 'ರೀತಿ' ನಿರ್ಮಾಣವಾಗಬಹುದು ಎಂಬುವುದು ರುದ್ರಟನ ನೀಲುವು. ಕುಂತಕನು ಮಾರ್ಗವನ್ನೆ 'ರೀತಿ' ಎಂದು ಕರೆದಿರುವನು. ಮಾರ್ಗವೆಂಬ ಪದ ಪ್ರಯೋಗ ಮಾಡಿ ಸುಕುಮಾರ, ವಿಚಿತ್ರ, ಮಧ್ಯಮ ಎಂಬ ಮೂರು ಮಾರ್ಗಗಳನ್ನು ಪ್ರತಿಪಾದಿಸಿದ್ದಾನೆ. ಒಟ್ಟಿನಲ್ಲಿ 'ರೀತಿ' ಪ್ರತಿಪಾದನೆಯು ಮೂರು ಸ್ಥಿತಿಯಲ್ಲಿ ಗುರುತಿಸಬಹುದು

**ದಂಡಿಯ ಮಾತು ಮಾರ್ಗ**

ದಂಡಿ ಎರಡು ಮಾರ್ಗಗಳನ್ನು ಪ್ರಧಾನವಾಗಿ ಸೂಚಿಸಿ ಅವು ಗುಣಸಮನ್ವಿತವಾದಗಳೆಂದು ಹೇಳುತ್ತಾನೆ. 'ರೀತಿ' ಎಂಬ ಮಾತು ವಾಮನನಿಂದ ಈಚೆಗೆ ಹೆಚ್ಚು ರೂಢವಾಯಿತು. ಇದನ್ನು ದಂಡಿ "ಮಾತುಗಳ ಮಾರ್ಗ" ಎಂದು ಕರೆಯುತ್ತಾನೆ. ಮಾತುಗಳ ಮಾರ್ಗಗಳು ಅನೇಕ. ಅವುಗಳಲ್ಲಿ ಪರಸ್ಪರ ಸೂಕ್ಷ್ಮಬೇದಗಳು ಇವೆ. ಅವುಗಳಲ್ಲಿ ಸ್ಪಷ್ಟವಾದ ಬೇದಗಳಿರುವ ವೈದರ್ಭಿ, ಗೌಡೀಯ ಎಂಬ ಎರಡು ಮಾರ್ಗಗಳನ್ನು ಮಾತ್ರ ಹೇಳಲಾಗುವುದು ಎಂಬ ಅಭಿಪ್ರಾಯವಿದೆ. ಮಾರ್ಗಗಳನ್ನು ಹೀಗೆ ದೇಶವಾಚಕವಾಗಿ ಕರೆಯುವುದು ಭಾಮಹನಗಿಂತಲೂ ಹಿಂದಿನಿಂದ ಪ್ರಚಲಿತವಾಗಿತ್ತು. ಬಹುಶಃ ಪ್ರಾರಂಭದಲ್ಲಿ ಆಯಾ ದೇಶ ಪ್ರದೇಶಗಳ ಜನ ಮುಖ್ಯವಾಗಿ ಆ ಮಾರ್ಗಗಳಲ್ಲಿ ಬರೆದು ಅದಕ್ಕೆ ಆ ಪ್ರದೇಶದ ಹೆಸರೇ ರೂಢವಾಗಿರಬೇಕಂದು ಉಹಿಸಲಾಗಿದೆ. ವಿದರ್ಭ ದೇಶದ ಕವಿಗಳಿಗೆ ವಿಶಿಷ್ಟವಾದದ್ದು ವೈದರ್ಭಿ, ಗೌಡ ದೇಶದ ವಿದ್ವಾಂಸರ ಮಾರ್ಗ ಗೌಡಿ ಪ್ರಾರಂಭದ ಈ ಮಾತುಗಳು ಬಹಳ ಕಾಲ ಉಳಿದು ಬಂದದ್ದು ಮತ್ತು ಲಾಡೀಯಾ ಆವಂತಿಕಾ ಎಂದು ಅದೇ ರೀತಿಯಲ್ಲಿ ಬೆಳೆದು ಬಂದದ್ದು ಆಶ್ಚರ್ಯದ ಸಂಗತಿ ಎಂದೇ ಹೇಳಬಹುದು.

**ರೀತಿಯೇ ಮಾರ್ಗ**

ದಂಡಿಯು ಭಾಮಹನಿಗೆ ವಿರೋಧವಾದ ವಿವರಗಳನ್ನು ನೀಡಿರುವುದು ಕಾಣುತ್ತೇವೆ. ಯಾಕೆಂದರೆ ಭಾಮಹನಿಗೆ ಅಪ್ರಿಯವಾದ ವೈದರ್ಭಿಯನ್ನು ದಂಡಿಯು ತನ್ನ ತಲೆಯ ಮೇಲೆ ಹೊತ್ತುಕೊಂಡು ಮೆರೆಸಿರುವುದು ಕಾಣುತ್ತೇವೆ. "ಇತಿ ವೈದರ್ಬಿಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ" ಎಂದು ಹೇಳುತ್ತಾ ತಾನು ಹೇಳಿದ 'ದಶಗುಣ'ಗಳೆಲ್ಲವೂ "ವೈದರ್ಭಿ ಮಾರ್ಗದಲ್ಲಿ ಒಳಗೊಂಡಿದೆ. ಎಂದು ಸ್ಪಷ್ಟಪಡಿಸುತ್ತಾನೆ. ಇಂತಹ ಮಾರ್ಗದ ಅಭಿವ್ಯಕ್ತಿಯಲ್ಲಿಯೇ ಕಾವ್ಯದ ಸಾರವಿದೆ" ಎಂದು ವ್ಯಕ್ತಪಡಿಸುತ್ತಾನೆ.

'ರೀ' ಎಂಬುವುದು ಸಂಸ್ಕೃತದಲ್ಲಿರುವ 'ಧಾತು' ಅದರ ಅರ್ಥ "ಮಾರ್ಗ" ಅಂದರೆ ಹಾದಿ, ಪಥ ಎಂದಾಗುತ್ತದೆ. ಆದುದರಿಂದ ವಾಮನನು ಹೇಳಿರುವ ರೀತಿ ತತ್ತ್ವವು ದಂಡಿಯ ಮಾರ್ಗದೊಂದಿಗೆ ಒಂದಿಷ್ಟು ಸಂಬಂಧ ಹೊಂದಿವೆಯನ್ನಬಹುದು. ವಾಮನು ದಂಡಿಯು ಹೇಳಿರುವ ವೈದರ್ಭಿ, ಗೌಡೀಯಗಳನ್ನು ತೆಗೆದುಕೊಂಡು, ಅವುಗಳಿಗೆ 'ಪಾಂಚಾಲೀ' ಎಂಬುದೊಂದು ಹೊಸ ರೀತಿಯನ್ನು ಕೂಡಿಸಿದನು. ಆದುದರಿಂದ ವಾಮನನಲ್ಲಿ ಮೂರು ರೀತಿಗಳಾದವು. ಮೂರು ರೀತಿಗಳಲ್ಲಿಯೂ ಅರ್ಥ ಶಬ್ದಗುಣಗಳಿರುತ್ತವೆ. ಆದುದರಿಂದ ರೀತಿಯು ಕಾವ್ಯಸೌಂದರ್ಯವನ್ನು ಹೆಚ್ಚಿಸುವ ತತ್ವವಾಗಿದೆ ಎಂದು ವಾಮನು ಭಾವಿಸಿದ್ದಾನೆ.

**ರೀತಿ, ವೃತ್ತಿ, ಪ್ರವೃತ್ತಿ**

ಉದ್ಭಟನು 'ರೀತಿ'ಯನ್ನು "ವೃತ್ತಿ" ಎಂದು ಕರೆದಿರುವುದುಂಟು. ಇಲ್ಲಿಯವರೆಗಿನ ಆಲೋಚನೆಯನ್ನು ಅನುಲಕ್ಷಿಸಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಮೇಲುನೋಟಕ್ಕೆ ಭರತನ 'ಪ್ರವೃತ್ತಿ' ಉದ್ಬಡನ 'ವೃತ್ತಿ' ವಾಮನನ 'ರೀತಿ' ಕೆಲವು ವಿಶಿಷ್ಠ ಗುಣಗಳೂ ಸ್ವಲ್ಪ ಹೆಚ್ಚು–ಕಡಿಮೆ ಒಂದೇ ಆಗಿರುವಂತೆ ತೋರಬಹುದು.

ಆದರೆ ಅವುಗಳಿಗಿರುವ ಸೂಕ್ಷ್ಮವ್ಯತ್ಯಾಸವನ್ನು ನೋಡಲೇಬೇಕೆನಿಸುತ್ತದೆ. ಭರತನ ಪ್ರವೃತ್ತಿಯು ರಸೋದಯದ ಪ್ರಣಾಳಿಯಾಗಿದೆ. ಉದ್ಭಟನ ವೃತ್ತಿ 'ಅನುಪ್ರಾಸಕ್ಕೆ' ಕಾರಣವಾದ ವ್ಯಂಜನಾಕ್ಷರ ವಿನ್ಯಾಸವಾಗಿದೆ. ವಾಮನನ 'ರೀತಿ'ಯು ಶೈಲಿಗೆ ಸಂಬಂಧಿಸಿದ್ದಾಗಿದೆ. ರುದ್ರಟನು ಹಿಂದಿನ ರೀತಿಯ ಪ್ರಕಾರಗಳಿಗೆ 'ಲಾಟೀಯಾ' ಎಂಬ ಒಂದು ವಿನೂತನ ಹೆಸರು ಸೇರಿಸಿರುವುದು ಕಂಡುಬರುತ್ತದೆ. ಹೀಗಾಗಿ ಈಗ ರೀತಿಗಳು ನಾಲ್ಕಾದವು. ರುದ್ರಟನು ರೀತಿಗಳನ್ನು ರಸಗಳೊಡನೆ ಸಂಬಂಧ ಏರ್ಪಡುವಂತೆ ಮಾಡಿರುವುದು ಹೊಸ ಶೋಧ.

"ವೈದರ್ಭೀ ಪಾಂಚಾಲ್ಯೇ ಪ್ರೇಯಸಿ ಕರುಣೇ ಭಯಾನಕಾದ್ಭುತಯೋ।
ಲಾಟೀಯಾ ಗೌಡೀಯೆ ರೌದ್ರೆ ಕುರ್ಯಾರ್ವ್ಯಥೌಚಿತ್ಯಮ್॥[1]

ಈ ಮೇಲಿನ ಉಕ್ತಿಯು ಹೀಗೆ ವಿವರಿಸಬವುದು. 'ವೈದರ್ಬಿ–ಪಾಂಚಾಲೀಗಳು ಪ್ರೇಯಸಿ, ಕರುಣ, ಭಯಾನಕ, ಅದ್ಭುತ್ ರಸಗಳೊಂದಿಗೆ ಸಂಬಂಧ ಹೊಂದಿರುತ್ತವೆ. ಲಾಟೀಯಾ–ಗೌಡೀಯಗಳು ರೌದ್ರರಸದೊಂದಿಗೆ ಸಂಬಂಧ ಹೊಂದಿರುತ್ತವೆ.' ಎಂಬುವುದು ರುದ್ರಟನ ಅಭಿಮತ.

ರಾಜಶೇಖರನ್ನು "ರೀತಿ ಪ್ರಸ್ಥಾನ"ವನ್ನು ಕುರಿತಂತೆ ಒಂದಿಷ್ಟು ವಿಚಾರಗಳನ್ನು ವ್ಯಕ್ತಪಡಿಸುತ್ತಾನೆ. ಈತನು ವೈದರ್ಭಿ, ಗೌಡೀಯಾ, ಪಾಂಚಾಲೀ ಈ ಮೂರು ರೀತಿಗಳನ್ನು ಉಲ್ಲೇಖಿಸುತ್ತಾನೆ. ಹಾಗೆಯೇ ಮೂರು ರೀತಿಗಳಾದ "ವೈದರ್ಭಿ, ಗೌಡೀಯಾ, ಪಾಂಚಾಲಿ"[2] ಇವುಗಳಲ್ಲಿ ಸಾಕ್ಷಾತ್ ಸರಸ್ವತಿ ದೇವಿಯೇ ವಾಸವಾಗಿದ್ದಾಳೆ. " ವೇಷದ ವಿನ್ಯಾಸಕ್ರಮ ಪ್ರವೃತ್ತಿ, ವಿಲಾಸದ ವಿನ್ಯಾಸಕ್ರಮ ವೃತ್ತಿ, ವಚನದ ವಿನ್ಯಾಸಕ್ರಮವೇ ರೀತಿ"[3] ಎಂದು ಅಂತಿಮವಾಗಿ ಒಪ್ಪಿಕೊಳ್ಳುತ್ತಾನೆ. ರಾಜಶೇಖರನು "ಪಾಕ"ವನ್ನು ಕುರಿತು ಮಾತನಾಡುತ್ತಾನೆ. "ಪಾಕ"ವು ರೀತಿ ಕ್ರಮಕ್ಕೆ ಅನ್ವಯಗೊಳ್ಳುತ್ತದೆ. ಏಕೆಂದರೆ ರೀತಿಯನ್ನು ಶೈಲಿಗೆ ಹೊಂದಿಸಿಕೊಂಡಾಗ, ಶೈಲಿಯ ಸತ್ವಕ್ಕೆ ಸಂಬಂಧಿಸಿದಂತೆ ಪಾಕವು ನಿಲ್ಲಿಕೊಳ್ಳುತ್ತದೆ. ಈ ದೃಷ್ಟಿಯಿಂದ ಪಾಕದ ಕುರಿತು ಒಂಭತ್ತು ರೀತಿಯಲ್ಲಿ ವಿಶ್ಲೇಸಿರುವುದು ಕಾಣುತ್ತೇವೆ. ಜಗನ್ನಾಥನು ಆಯಾ ರಸಕ್ಕನುಗುಣವಾಗಿ ಪರಿಶೀಲಿಸಿ, ವೃತ್ತಿ, ಪ್ರವೃತ್ತಿಗಳನ್ನು ರೀತಿಗೆ ಬದಲಾಗಿ ಉಪಯೋಗಿಸಿರುವುದು ಕಾಣುತ್ತೇವೆ.

**ಉಪಸಂಹಾರ**

'ರೀತಿ' ಎಂಬುದು ಮೊದಮೊದಲಿಗೆ ಆಯಾ ಪ್ರದೇಶದಲ್ಲಿದ್ದ ಕವಿಗಳ ಕಾವ್ಯರಚನೆಗೆ ಪೂರಕವಾಗಿ ಬೆಳೆಯಿತು. ಒಂದೊಂದು ಪ್ರದೇಶದಲ್ಲಿ ಪ್ರಚಲಿತವಾಗಿ ರಚಿತವಾದ ವಿಶೇಷ ಬರಹದ ಲಕ್ಷಣಗಳನ್ನು ಆಧಾರವಾಗಿರಿಸಿಕೊಂಡು ವಿಲಕ್ಷಣವಾಗಿ, ರಸವತ್ತಾಗಿ ಕಾವ್ಯ ಕೃಷಿ ನಡೆದ್ದದು ಕಾಣುತ್ತೇವೆ. ಹಂತ ಎರಡರಲ್ಲಿ ಕವಿಗಳು ತಮ್ಮ ಕಾವ್ಯಕ್ಕೆ ಆಯ್ಕೆ ಮಡಿಕೊಳ್ಳುವ ವಸ್ತುವಿನ ಬಂಧಕ್ಕೆ ಸಂಬಂಧಗೊಂಡಿತು. ಅಂದರೆ ತಾವು ಆಯ್ಕೆ ಮಾಡಿಕೊಂಡ ವಿಷಯವನ್ನು ಸರಿಯಾದ ಕ್ರಮದಲ್ಲಿ ನಿರ್ವಹಿಸುವುದಕ್ಕೆ ಬೇಕಾದ ವಿಶೇಷವಾದ ಪದಗಳ ರಚನಾಕ್ರಮಕ್ಕೆ ಅದು ಸಂಬಂಧಿಯಾಯಿತು. ಹಂತ ಮೂರರಲ್ಲಿ 'ರೀತಿ' ಸಿದ್ಧಾಂತವು ಕಾವ್ಯದ

[1] *ಹಿರೇಮಠ.ಎಸ್.ಎಂ. (2003). ಭಾರತೀಯ ಕಾವ್ಯಮೀಮಾಂಸೆ–ಒಳನೋಟಗಳ. ಪು.ಸಂ: 188*

[2] *ಅದೇ., ಪು.ಸಂ: 189*

[3] *ಅದೇ., ಪು.ಸಂ: 189*

ಒಳಗಡೆ ಪ್ರವೇಶ ಪಡೆಯಿತು. ಅದು ಕವಿಯ ಮನೋಧರ್ಮ–ವ್ಯಕ್ತಿತ್ವವನ್ನು ಅಭಿವ್ಯಕ್ತಿಸಬಹುದಾದ ಒಂದು ಪರಿಕಲ್ಪನೆಯಾಯಿತು. ಇಂತಹ ಸಂದರ್ಭದಲ್ಲಿಯೇ ರೀತಿಯು ಶೈಲಿಯೆಡೆಗೆ ತಿರುಗಿಕೊಂಡಿತು.

ಹೀಗೆ ಭರತನಿಂದ ಹಿಡಿದು ಕುಂತಕನವರೆಗಿನ ಅವಧಿಯಲ್ಲಿ ಮುಖ್ಯವಾಗಿ ಮೇಲಿನ ಘಟ್ಟಗಳ ಒಟ್ಟು ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ತದನಂತರ ಜಗನ್ನಾಥನವರೆಗೂ ಮುಂದೆ ಬೆಳೆದು ಹೋಗಿದೆ. ಈ ಮೇಲಿನ ಮೂರು ವಿಚಾರಗಳು ದಂಡಿಯ ವಿಚಾರಗಳಿಗೆ ಹೊಂದಾಣಿಕೆಯಾಗುತ್ತವೆ.

**ಪರಾಮರ್ಶನ /ಆಧಾರ ಗ್ರಂಥಗಳು**


- ಇನಾಮದಾರ ವಿ.ಎಂ. (2009). ಪಾಶ್ಚಾತ್ಯ ಕಾವ್ಯ ಮೀಮಾಂಸೆ. ಸಮಾಜ ಪುಸ್ತಕಾಲಯ, ಧಾರವಾಡ.
- ಹಿರೇಮಠ ಎಸ್.ಎಂ. (2002). ಆಧುನಿಕ ಕನ್ನಡ ಕಾವ್ಯಮೀಂಮಾಸೆ. ಅಶ್ವಿನಿ ಪ್ರಕಾಶನ, ಕಲಬುರ್ಗಿ.
- ಹಿರೇಮಠ ಎಸ್.ಎಂ. (2003). ಭಾರತೀಯ ಕಾವ್ಯಮೀಮಾಂಸೆ–ಒಳನೋಟಗಳು. ವಿದ್ಯಾನಿಧಿ ಪ್ರಕಾಶನ, ಗದಗ.
- ನಿಂಗಣ್ಣ ಚಿ.ಸಿ. (2008). ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ.
- ತಿಪ್ಪೇರುದ್ರಸ್ವಾಮಿ ಎಚ್. (2008). ತೌಲನಿಕ ಕಾವ್ಯಮೀಮಾಂಸೆ. ಪ್ರಕಾಶಕರು: ಡಿ.ವಿ.ಕೆ ಮೂರ್ತಿ, ಮೈಸೂರು.


IIMRD JOURNALS